**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ.**

**ವಿಷಯ:** "1.29 ಲಕ್ಷ ಅರ್ಹರಿಗಿಲ್ಲ ಗೃಹಲಕ್ಷ್ಮೀ, ಕಾದು ಸುಸ್ತಾದ ನಾರಿಯರು "ಸಿಗದ ಲಕ್ಷ್ಮೀ ಭಾಗ್ಯ" ಎಂಬ ವಿಶೇಷ ಶೀರ್ಷಿಕೆಯಡಿಯು ದಿನಾಂಕ:23.07.2024ರ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಕಾಂಗ್ರೆಸ್ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿಗಳ ಪೈಕಿ "ಗೃಹಲಕ್ಷ್ಮೀ" ಯೋಜನೆಯು ಒಂದಾಗಿದೆ. ಆದರೆ, ಸದರಿ ಯೋಜನೆಯ ಫಲಾನುಭವಿಗಳಿಗೆ ಪ್ರತಿ ತಿಂಗಳು ಹಣ ಜಮಾ ಆಗದೇ 2-3 ತಿಂಗಳಿಗೊಮ್ಮೆ ಜಮಾ ಆಗುತ್ತಿರುವುದು ದುರ್ದೈವದ ಸಂಗತಿ. ರಾಜ್ಯದ ಸುಮಾರು 1.29 ಲಕ್ಷ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯ ಹಣವೇ ಜಮೆಯಾಗಿಲ್ಲ ಎಂದು ವರದಿಯಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯ ವೇಳೆಯಲ್ಲಿ ರಾಜ್ಯ ಸರ್ಕಾರ ಗೃಹಲಕ್ಷ್ಮೀ ಯೋಜನೆಯ ಹಣ ಜಮೆ ಮಾಡಿತ್ತು. ಒಂದು ಕಡೆಗೆ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿವೆ. ಮತ್ತೊಂದು ಕಡೆ ಲೋಕಸಭಾ ಚುನಾವಣೆ ನಂತರ ಇನ್ನುವರೆಗೂ ಹಣ ರಾಜ್ಯದ ಗೃಹಲಕ್ಷ್ಮೀ ಫಲಾನುಭವಿಗಳಿಗೆ ಜಮೆಯಾಗದಿರುವುದು ಆತಂಕ ಮೂಡಿಸಿದೆ.

ಗೃಹಲಕ್ಷ್ಮೀ ಯೋಜನೆಯ ಹಣ ಜಮೆಯಾಗದೇ ಇರುವುದನ್ನು ಗಮನಿಸಿದಾಗ ರಾಜ್ಯ ಸರ್ಕಾರದ ಬೊಕ್ಕಸ ಬರಿದಾಗಿದೆ ಎಂದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಚುನಾವಣೆ ವೇಳೆ ಜನರಿಗೆ ಆಶ್ವಾಸನೆ ನೀಡಿದ ಗ್ಯಾರಂಟಿ ಯೋಜನೆಗಳ ಹಣೆಬರಹ ಇಷ್ಟೇ ಎಂದು ತಿಳಿಯುತ್ತದೆ. ಒಟ್ಟಾರೆ ಹೇಳುವುದಾದರೆ ರಾಜ್ಯದಲ್ಲಿ ಗೃಹಲಕ್ಷ್ಮೀ ಹಣಕ್ಕಾಗಿ ಕಾತುರದಿಂದ ಕಾಯುತ್ತಿರುವ ಮಹಿಳೆಯರಿಗೆ ಆದಷ್ಟು ಬೇಗ ಹಣ ಜಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವ ಕುರಿತು ".

**ಉತ್ತರ :**

ಸರ್ಕಾರದ ಗ್ಯಾರಂಟಿ ಯೋಜನೆಗಳ ಪೈಕಿ ಗೃಹಲಕ್ಷ್ಮೀ ಯೋಜನೆಯು ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ರಾಜ್ಯದ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು ರೂ.2000/- ಗಳನ್ನು ನೀಡುವ ಗೃಹಲಕ್ಷ್ಮೀ ಯೋಜನೆಯನ್ನು ದಿನಾಂಕ:06-06-2023ರ ಆದೇಶದಂತೆ ಜಾರಿಗೊಳಿಸಲಾಗುತ್ತಿದೆ. ಸದರಿ ಯೋಜನೆಯ ಮಾರ್ಗಸೂಚಿಗಳನ್ನು ದಿನಾಂಕ:17.07.2023 ರಂದು ಹೊರಡಿಸಲಾಗಿದೆ.

ಗೃಹಲಕ್ಷ್ಮೀ ಯೋಜನೆಯಡಿ ದಿನಾಂಕ:19-07-2023 ರಿಂದ ಫಲಾನುಭವಿಗಳ ನೋಂದಣಿ ಆರಂಭಿಸಿದ್ದು, ದಿನಾಂಕ:30-08-2023 ರಂದು ಮೈಸೂರಿನಲ್ಲಿ ನಡೆದ ಗೃಹಲಕ್ಷ್ಮೀ ಯೋಜನೆಯ ರಾಜ್ಯ ಮಟ್ಟದ ಸಮಾರಂಭದಲ್ಲಿ ಫಲಾನುಭವಿಗಳ ಖಾತೆಗೆ DBT ಮೂಲಕ ಧನಸಹಾಯ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಗೃಹಲಕ್ಷ್ಮೀ ಯೋಜನೆಯಡಿ ಮಾರ್ಚ್-2024ಕ್ಕೆ 1.23 ಕೋಟಿ ಫಲಾನುಭವಿಗಳು ನೋಂದಣಿಯಾಗಿದ್ದು, ನೋಂದಣಿಯಾದ ಫಲಾನುಭವಿಗಳ ಪೈಕಿ 22.45 ಲಕ್ಷ ಪರಿಶಿಷ್ಟ ಜಾತಿಯ ಫಲಾನುಭವಿಗಳು, 8.67 ಲಕ್ಷ ಪರಿಶಿಷ್ಟ ಪಂಗಡದ ಫಲಾನುಭವಿಗಳು ಹಾಗೂ 92.83 ಲಕ್ಷ ಇತರೆ ಫಲಾನುಭವಿಗಳಾಗಿರುತ್ತಾರೆ. 2023-24ನೇ ಸಾಲಿನಲ್ಲಿ ಗೃಹಲಕ್ಷ್ಮೀ ಯೋಜನೆಯಡಿ 17000 ಕೋಟಿ ಅನುದಾನ ಒದಗಿಸಲಾಗಿದ್ದು, ಶೇಕಡ 100ರಷ್ಟು ವೆಚ್ಚ ಭರಿಸಲಾಗಿದೆ.

ಗೃಹಲಕ್ಷ್ಮೀ ಯೋಜನೆಯಡಿ 2024-25ನೇ ಸಾಲಿನಲ್ಲಿ ರೂ.28608.40 ಕೋಟಿ ಅನುದಾನವನ್ನು ನಿಗದಿಗೊಳಿಸಲಾಗಿದೆ. ಜೂನ್-2024ರ ಅಂತ್ಯಕ್ಕೆ ಯೋಜನೆಯಡಿ 1.25 ಕೋಟಿ ಫಲಾನುಭವಿಗಳು ನೋಂದಣಿಯಾಗಿದ್ದು, ನೋಂದಣಿಯಾದ ಫಲಾನುಭವಿಗಳ ಪೈಕಿ 22.61 ಲಕ್ಷ ಪರಿಶಿಷ್ಟ ಜಾತಿಯ ಫಲಾನುಭವಿಗಳು, 8.82 ಲಕ್ಷ ಪರಿಶಿಷ್ಟ ಪಂಗಡದ ಫಲಾನುಭವಿಗಳು ಹಾಗೂ 93.60 ಲಕ್ಷ ಇತರೆ ಫಲಾನುಭವಿಗಳಾಗಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ-2024ರ ಮಾಹೆಗಳ ಧನಸಹಾಯ ಈಗಾಗಲೇ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯಡಿ ಆಗಸ್ಟ್-2023ರ ಮಾಹೆಯಿಂದ ಮೇ-2024ರ ಮಾಹೆಯವರೆಗೆ ನೋಂದಣಿಯಾದ, ಧನಸಹಾಯ ಪಡೆದ ಫಲಾನುಭವಿಗಳ ವಿವರ ಮತ್ತು ಪಾವತಿಸಲಾದ ಧನಸಹಾಯದ ಮೊತ್ತ ಈ ಕೆಳಗಿನಂತಿದೆ.

| ಕ್ರ ಸಂ | ಮಾಹೆ | ನೋಂದಣಿಯಾದ ಫಲಾನುಭವಿಗಳ ಸಂಖ್ಯೆ | ಅರ್ಹ ಫಲಾನುಭವಿಗಳ ಸಂಖ್ಯೆ | ಯಶಸ್ವಿಯಾಗಿ ಧನಸಹಾಯ ಪಾವತಿಸಲಾದ ಫಲಾನುಭವಿಗಳ ಸಂಖ್ಯೆ | ಧನಸಹಾಯ ಪಾವತಿಸಲಾದ ಮೊತ್ತ (ರೂ.ಕೋಟಿಗಳಲ್ಲಿ) | ಧನಸಹಾಯ ಪಾವತಿಗೆ ಬಾಕಿ ಇರುವ ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| 1 | ಆಗಸ್ಟ್-2023 | 10848006 | 10752418 | 10590228 | 2118.04 | 162190 |
| 2 | ಸೆಪ್ಟಂಬರ್-2023 | 11441652 | 11294350 | 10999373 | 2199.87 | 294977 |
| 3 | ಅಕ್ಟೋಬರ್-2023 | 11666036 | 11460599 | 11223333 | 2244.66 | 237266 |
| 4 | ನವೆಂಬರ್-2023 | 11722982 | 11505540 | 11294165 | 2258.33 | 211375 |
| 5 | ಡಿಸೆಂಬರ್-2023 | 11777328 | 11553071 | 11357081 | 2271.41 | 195990 |
| 6 | ಜನವರಿ-2024 | 12107065 | 11830963 | 11562832 | 2312.56 | 268131 |
| 7 | ಫೆಬ್ರವರಿ-2024 | 12305870 | 11965144 | 11802874 | 2360.57 | 162270 |
| 8 | ಮಾರ್ಚ್-2024 | 12395327 | 12154700 | 12003466 | 2400.69 | 151234 |
| 9 | ಏಪ್ರಿಲ್-2024 | 12395327 | 12154699 | 12020639 | 2404.12 | 134060 |
| 10 | ಮೇ-2024 | 12395327 | 12154700 | 12025235 | 2405.05 | 129465 |
| | | | | ಒಟ್ಟು | **22975.32** | |

ಗೃಹಲಕ್ಷ್ಮಿ ಯೋಜನೆ ಪ್ರಾರಂಭವಾದಾಗಿನಿಂದ ಇದುವರೆವಿಗೂ ಒಟ್ಟು 10 ತಿಂಗಳ ಧನಸಹಾಯ ಅಂದರೆ ಪ್ರತೀ ಫಲಾನುಭವಿಗೆ ಸರಾಸರಿ ರೂ.2,000/-ಗಳಂತೆ ಅವರ ಖಾತೆಗೆ ನೇರವಾಗಿ ಆಯಾ ಮಾಹೆಯಲ್ಲಿಯೇ ಜಮೆ ಮಾಡಲಾಗಿದೆ. ನೋಂದಣಿಯಾದ ಫಲಾನುಭವಿಗಳ ಪೈಕಿ E-kyc fail, Bank account not seeded, NPCI mapping failed, Inactive bank account, Name not matching, Aadhar need to be updated ಇತ್ಯಾದಿ ತಾಂತ್ರಿಕ ಕಾರಣಗಳಿರುವ ಫಲಾನುಭವಿಗಳಿಗೆ ಧನಸಹಾಯ ಪಾವತಿಸಿರುವುದಿಲ್ಲ. ಆದರೆ, ಫಲಾನುಭವಿಯು ತನ್ನ ಅರ್ಜಿ ಸಂಬಂಧಿತ ತಾಂತ್ರಿಕ ಸಮಸ್ಯೆ ಸರಿಪಡಿಸಿಕೊಂಡ ಕೂಡಲೇ ಸ್ವಯಂಚಾಲಿತವಾಗಿ ದತ್ತಾಂಶದಲ್ಲಿ ಸ್ವಯಂ ನವೀಕರಣಗೊಂಡು ಮುಂದಿನ ಹಂತದ ಧನಸಹಾಯ ಪಾವತಿಗೆ ಚಾಲನೆಗೊಳ್ಳುತ್ತದೆ.

ಗೃಹಲಕ್ಷ್ಮಿ ಯೋಜನೆಯ ಮಾನದಂಡಗಳನ್ವಯ ಕುಟುಂಬದ ಯಜಮಾನಿ ಮತ್ತು ಆಕೆಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಅಥವಾ ಜಿ.ಎಸ್.ಟಿ. ರಿಟರ್ನ್ಸ್ ಸಲ್ಲಿಸುವವರಾಗಿದ್ದಲ್ಲಿ ಯೋಜನೆಯ ಲಾಭ ಪಡೆಯಲು ಅರ್ಹರಿರುವುದಿಲ್ಲ. ಅಂತಹ ಫಲಾನುಭವಿಗಳನ್ನು ಯೋಜನೆಯಡಿ ಪರಿಗಣಿಸಿರುವುದಿಲ್ಲ.

ಪ್ರಸ್ತುತ, ಜೂನ್ ಮತ್ತು ಜುಲೈ-2024ರ ಎರಡು ಮಾಹೆಗಳಿಗೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ಮಮಇ 167 ಮಮಅ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.